**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ :: 140/2015**

ಪ್ರಾಸಾ- 15 ಚಾಸಾ- 17

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಕೋಮಲಾದೇವಿ ಜೆ |
| ಗಂಡನ ಹೆಸರುಃ | ಃ | ರಾಮೇಗೌಡ |
| ವಯಸ್ಸುಃ | ಃ | 64 ವರ್ಷ |
| ಉದ್ಯೋಗಃ | ಃ | ನಿವೃತ್ತ ಸಬ್ ಪೋಸ್ಟ್ ಮಾಸ್ಟರ್<br>ಜಿಲ್ಲಾ ಅಂಚೆ ಕಛೇರಿ ಹಾಸನ |
| ವಾಸಃ | ಃ | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 01-09-2023ಃ**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2012 ರಿಂದ 2016 ರ ತನಕ ಹಾಸನ ಜಿಲ್ಲಾ ಅಂಚೆ ಕಛೇರಿಯಲ್ಲಿ ಸಬ್ ಪೋಸ್ಟ್ ಮಾಸ್ಟರ್ ಆಕೆ ಕೆಲಸ ಮಾಡುತ್ತಿದ್ದೆ.

2. ಪದ್ಮಾವತಿ ಎನ್ನುವವರ ಎನ್.ಎಸ್.ಸಿ. ಪಾಲಿಸಿಯ ಬಗ್ಗೆ ನಾನು ಚೆಕ್ ಮೂಲಕ ಅವರಿಗೆ ಹಣ ಪಾವತಿ ಮಾಡಿರುತ್ತೇನೆ. ಈ ಬಗ್ಗೆ ಸಾಕ್ಷಿ ಹೇಳಲು ಲೋಕಾಯುಕ್ತ ಪೊಲೀಸರು ನನ್ನನ್ನು ಕರೆಸಿದ್ದರು. ಈ ಕೇಸಿನ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ಮಾಹಿತಿ ನೀಡುವಂತೆ ನಮ್ಮ ಇಲಾಖೆಯ ಹಾಸನ ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪತ್ರ ನೀಡಿರುತ್ತಾರೆ. ಈಗ ತೋರಿಸಿದ ದಾಖಲೆ ಸದರಿ ಪತ್ರ ಆಗಿದ್ದು, ಅದನ್ನು ನಿಶಾನೆ ಪಿ.98 ಎಂದು ಗುರುತಿಸಲಾಗಿದೆ. ಸದರಿ ಪತ್ರದ ಮೇರೆಗೆ ನಾನು ಲೋಕಾಯುಕ್ತ ಪೊಲೀಸ್ ನಿರೀಕ್ಷಕರಿಗೆ ಪತ್ರದ ಮೂಲಕ ಮಾಹಿತಿ ನೀಡಿರುತ್ತೇನೆ.

ಈಗ ತೋರಿಸಿದ ದಾಖಲೆ ಸದರಿ ಪತ್ರ ಆಗಿದ್ದು ಅದನ್ನು ನಿಶಾನೆ ಪಿ.99 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.99(ಎ) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರಿಂದಃ-**

ನಮ್ಮ ಕಛೇರಿಯಲ್ಲಿದ್ದ ಡಿಸ್ಚಾರ್ಜ್ ರೆಕಾರ್ಡ್ ನ ಆಧಾರದಲ್ಲಿ ನಾನು ನಿಶಾನೆ ಪಿ.99 ರಂತೆ ಲೋಕಾಯುಕ್ತ ಪೊಲೀಸರಿಗೆ ಮಾಹಿತಿ ನೀಡಿರುತ್ತೇನೆ. ಆದರೆ ನಿಶಾನೆಪಿ.99 ರಲ್ಲಿ ನೀಡಿರುವ ಮಾಹಿತಿಯನ್ನು ಡಿಸ್ಚಾರ್ಜ್ ರೆಕಾರ್ಡ್ ನ ಆಧಾರದಲ್ಲಿ ನೀಡಿರುತ್ತೇನೆ ಎಂದು ನಾನು ನಿಶಾನೆ ಪಿ.99 ಪತ್ರದಲ್ಲಿ ಹೇಳಿರುವುದಿಲ್ಲ. ಸಂಬಂಧಪಟ್ಟ ಡಿಸ್ಚಾರ್ಜ್ ರೆಕಾರ್ಡ್ ನ ನಕಲನ್ನು ನಾನು ಲೋಕಾಯುಕ್ತ ಪೊಲೀಸರಿಗೆ ಕಳುಹಿಸಿಲ್ಲ. ನಿಶಾನೆ ಪಿ.99 ರಲ್ಲಿ ಹೇಳಿದ ವಿವರದಂತೆ ನಾನು ಪದ್ಮಾವತಿಯವರಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸರು ಕೇಳಿದಂತೆ ಅವರಿಗೆ ಕೇಸಿನಲ್ಲಿ ಅನುಕೂಲವಾಗುವ ರೀತಿಯಲ್ಲಿ ನಾನು ಪದ್ಮಾವತಿಯವರಿಗೆ ರೂ.36,823/- ಪಾವತಿ ಮಾಡಿರುತ್ತೇನೆ ಎಂದು ನಾನು ನಿಶಾನೆ ಪಿ.99 ರಂತೆ ಸುಳ್ಳು ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**